ಎಂ. ಎಸ್. ಐ. ಎಲ್. ರವರಿಂದ ವಸೂಲಿ ತೆರಿಗೆಯಂ ವಸೂಲಿ

೮೫೨ ಶ್ರೀ ಮಲ್ಲಿಖಾರ್ಜುನ ಖರ್ಗೆ (ಗುರುಮಿಠಕಲ್)ಮಾನ್ಯ ಆರ್ಥಿಕ ಮತ್ತು ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಎಮ್. ಎಸ್. ಐ. ಎಲ್. ಇವರಿಂದ ಮಾರಾಟ ತೆರಿಗೆ ಹಾಗೂ ಅಬಕಾರಿ ಸುಂಕದ ರೂಪದಲ್ಲಿ ವಸೂಲಿ ಮಾಡಲಾದ ಮೊತ್ತವೆಷ್ಟು ?

ಆ) ೧೯೯೦–೯೧ನೇ ಸಾಲಿನಲ್ಲಿ ಸರ್ಕಾರ ನಿರೀಕ್ಷಿಸಿರುವ ಮೊತ್ತವೆಷ್ಟು ?

ಶ್ರೀ ಎಂ. ರಾಜಶೇಖರಮೂರ್ತಿ (ಆರ್ಥಿಕ ಮತ್ತು ಅಬಕಾರಿ ಮಂತ್ರಿಗಳು)

ಅ) ಎಮ್. ಎಸ್. ಐ. ಎಲ್. ಇವರಿಂದ ಕಳೆದ ಮೂರು ವರ್ಷಗಳಲ್ಲಿ ವಸೂಲಿ ಮಾಡಿದ ಮಾರಾಟ ತೆರಿಗೆ ಈ ಕೆಳಕಂಡಂತಿದೆ,

ವರ್ಷ	ರೂ. ಲಕ್ಷಗಳಲ್ಲಿ
೧೯೮೭–೮೮	ರೂ. ೪ . ೮೧
೧೯೮೮–೮೯	ರೂ. ೯ . ೯೩
೧೯೮೯–೯೦	ರೂ.೯೩ . ೫೩

೧೯೯೯–೯೦ನೇ ಸಾಲಿನಲ್ಲಿ ಎಮ್. ಎಸ್. ಐ. ಎಲ್. ರವರಿಂದ ವಸೂಲಿ ಮಾಡಿದ ಅಬಕಾರಿ ಸುಂಕ ರೂ. ೧೨೩.೯೮ ಲಕ್ಷಗಳು.

ಆ) ಸದ್ಯದಲ್ಲಿ ಅಂದಾಜು ಮಾಡಲು ಸಾಧ್ಯವಿರುವುದಿಲ್ಲ.

ಜೆ. ಪಿ. ನಗರದಲ್ಲಿ ಹೆಚ್. ಟಿ. ವಿದ್ಯುತ್ ತಂತಿಗಳಂ ಹಾಗಂ ಹೋಗುತ್ತಿರುವುದರಿಂದ ಮನುಷ್ಯರಿಗೆ ಅಪಾಯ

೧೧೫೭ ಶ್ರೀ ಎಂ. ನಾರಾಯಣಸ್ವಾಮಿ. (ಬೇತಮಂಗಲ) ಮಾನ್ಯ ಕೈಗಾರಿಕೆ, ಇಂಧನ ಮತ್ತು ವಕ್ಫ್ಸ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಬೆಂಗಳೂರಿನ ಜೆ. ಪಿ. ನಗರದ ೫ನೇ ಮತ್ತು ೬ನೇ ಹಂತಗಳ ೧೬ನೇ ಮತ್ತು ೧೭ನೇ ಅಡ್ಡ ರಸ್ತೆಗಳಲ್ಲಿನ ಕಿರಿದಾದ ಗಲ್ಲಿಗಳ ಮೇಲೆ ೧೧ ಕೆ. ವಿ. ಹೆಚ್. ಟಿ, ತಂತಿಗಳು ಹಾದು ಹೋಗುತ್ತಿರುವುದು ನಿಜವೇ;

ಆ) ಹಾಗಿದ್ದಲ್ಲಿ ಒಬ್ಬ ಹುಡುಗನು ಜೆ. ಪಿ. ನಗರದ ಜನವಾಸವಿರುವ ಗಲ್ಲಿಗಳಲ್ಲಿ ಹಾದು ಹೋಗುತ್ತಿರುವ ಹೆಚ್. ಟಿ. ತಂತಿಗಳನ್ನು ಮುಟ್ಟಿದುದರಿಂದ ವಿದ್ಯುತ್ ಅಪಘಾತಕ್ಕೆ ತುತ್ತಾದುದು ನಿಜವೇ;

ಇ) ಈ ಹೆಚ್. ಟಿ. ತಂತಿಗಳನ್ನು ಡಿಸ್‌ಕನೆಕ್ಟ ಮಾಡುವಂತೆ ಮತ್ತು ಭೂಗತ ಕೇಬಲ್ ವ್ಯವಸ್ಥೆಯನ್ನು ಮಾಡಲು ಜೆ. ಪಿ. ನಗರದ ನಿವಾಸಿಗಳು ಸರ್ಕಾರಕ್ಕೆ ಮನವಿ ಮಾಡಿದ್ದಾರೆಯೇ.

ಈ) ಈ ೧೧ ಕೆ. ವಿ. ಹೆಚ್. ಟಿ. ತಂತಿಗಳನ್ನು ಡಿಸ್‌ಕನೆಕ್ಟ್ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕೆ, ಇಂಧನ ಮತ್ತು ವಕ್ಫ್ಸ ಸಚಿವರು.)

ಅ) ಹೌದು.

ಆ) ಈ ಪ್ರಕರಣ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಗಮನಕ್ಕೆ ಬಂದಿರುವುದಿಲ್ಲ.

ಇ) ಹೌದು, ಜೆ. ಪಿ. ನಗರದ ನಿವಾಸಿಗಳು ಓವರ್ ಹೆಡ್ ತಂತಿಗಳನ್ನು ತೆಗೆದು ಭೂಗತ ಕೇಬಲ್ ವ್ಯವಸ್ಥೆಯನ್ನು ಮಾಡಲು ಮಂಡಳಿಗೆ ಮನವಿ ಮಾಡಿರುತ್ತಾರೆ.

ಈ) ಬೆಂಗಳೂರು ನಗರದಲ್ಲಿರುವ ಓವರ್ ಹೆಡ್ ತಂತಿಗಳನ್ನು ತೆಗೆದು ಭೂಗತ ಕೇಬಲ್ ವ್ಯವಸ್ಥೆಯನ್ನು ಏರ್ಪಡಿಸುವ ಪ್ರಸ್ತಾವನೆಯು ಮಂಡಳಿಯ ಮುಂದಿದೆ. ಆದರೆ ಓವರ್ ಹೆಡ್ ತಂತಿಗಳನ್ನು ತೆಗೆದು ಭೂಗತ ಕೇಬಲ್‌ಗಳನ್ನು ಹಾಕುವ ಕಾರ್ಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಹಣ ಬೇಕಾಗುತ್ತದೆ. ಆದುದರಿಂದ ಈ ಕಾರ್ಯವನ್ನು ಮಂಡಳಿಯ ಆರ್ಥಿಕ ಸಂಪನ್ಮೂಲಕ್ಕನುಗುಣವಾಗಿ ಹಂತ ಹಂತವಾಗಿ ಮಾಡಲಾಗುವುದು.

Total capital for Major Industries.

943 Sri. K. LAKKAPPA (Kunigal).—Will the Minister of Industries be pleased to state·—

a) total investment of state capital in Major industries in the State;

b) losses sustained in such major industries (detail and names of industries be furnished for the last three years;

c) reasons for losses ;

d) whether the Government has taken any measures to make these industries to run on profits ; if so, details of measures taken be furnished ?

SRI S. M. YAHYA (Industries Minister).

a) As on 31-3-89 (Rs. in lakhs)

i)	Investment of Govt. of Karnataka :	2,11,709
ii)	Investment by others :	1,85.947
	Total Investment	3,97,656

b) Details are in Annexures

c) Provision of goods and or services to the community or to target groups at rates lower than cost price consistant with the socio economic objectives of the Govt.

2) Higher establishmant costs.

3) Non-economic operation and low efficiency in some cases.

d) The working of these Enterprises are constantly reviewed by the Government with a view to avoid losses and increase profitability.